**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 351(412)
ಸದಸ್ಯರ ಹೆಸರು : ಶ್ರೀ ಚಿದಾನಂದ್ ಎಂ ಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 19-02-2024
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಓದುವ ಹವ್ಯಾಸ ಮೂಡಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದ್ದು, ಇದನ್ನು ಕಾರ್ಯಗತ ಮಾಡಲು ಯೋಜನೆಯನ್ನು ರೂಪಿಸಿದೆಯೇ; | ಹೌದು ರೂಪಿಸಲಾಗಿದೆ. |
| ಆ) | ಇದನ್ನು ಕಾರ್ಯಗತಗೊಳಿಸಲು ಪ್ರತಿ ಪದವಿ ಪೂರ್ವ ಕಾಲೇಜುಗಳ ಗ್ರಂಥಾಲಯಗಳಲ್ಲಿ ವಿದ್ಯಾರ್ಥಿ ಮಿತ್ರಗಳನ್ನಾಗಿ ಮಾಡಲು ಗ್ರಂಥಪಾಲಕರ ನೇಮಕ ಮಾಡಿದಿಯೇ; ಮತ್ತು ಗ್ರಂಥಪಾಲಕರು ಇರುವ ಕಡೆ ತರಬೇತಿ ನೀಡಿದೆಯೆ; ಇಲ್ಲದಿದ್ದಲ್ಲಿ ಯಾವಾಗ ಈ ಯೋಜನೆ ರೂಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದು; | ಇಲಾಖೆಯಲ್ಲಿ 124 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಗ್ರಂಥಪಾಲಕರ ಹುದ್ದೆ ಮಂಜೂರಾಗಿದ್ದು, ಈ ಪೈಕಿ 98 ಕಾಲೇಜುಗಳಲ್ಲಿ ಗ್ರಂಥಪಾಲಕರನ್ನು ನೇಮಕ ಮಾಡಲಾಗಿದೆ. ಪ್ರಸ್ತುತ 10 ಗ್ರಂಥಪಾಲಕರ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. |
| ಇ) | ಪದವಿ ಪೂರ್ವ ಕಾಲೇಜು ಹಂತವು ವಿದ್ಯಾರ್ಥಿಗಳ ಭವಿಷ್ಯದ ದಿಕ್ಕನ್ನು ಸೂಚಿಸುವ ಹಂತವಾಗಿದೆ ಇಲ್ಲಿ ಹೆಚ್ಚು ಸಮಯ ಓದಿನಲ್ಲಿ ಕಳೆಯುವ ಸಮಯವಾಗಿರುವುದರಿಂದ ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ ಮೂಡಿಸಲು ಗ್ರಂಥಾಲಯದ ಕಡೆಗೆ ಆಕರ್ಷಣೆ ಮಾಡಲು ಇಲಾಖೆಯು ಯಾವ ಯೋಜನೆ ರೂಪಿಸಿದೆ ? | 1. ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಪ್ರಾಯೋಗಿಕ ತರಗತಿಗಳಿರುವ ವಿಷಯಗಳಲ್ಲಿ ರೆಕಾರ್ಡ್ ಬರೆಯಬೇಕಾಗಿರುವುದರಿಂದ ಅವರು ಓದುವ ಹವ್ಯಾಸ ಬೆಳಸಬೇಕಾಗುತ್ತದೆ.<br>2. 2023-24ನೇ ಸಾಲಿನಿಂದ ಪ್ರಾಯೋಗಿಕ ತರಗತಿಗಳಿಲ್ಲದ ಎಲ್ಲಾ ವಿಷಯಗಳಿಗೆ ಆಂತರಿಕ ಮೌಲ್ಯಮಾಪನ ವ್ಯವಸ್ಥೆ ಜಾರಿಯಾಗಿದ್ದು ಇದರಲ್ಲಿ ಅಂಕಗಳು ವಿದ್ಯಾರ್ಥಿಗಳು ನಿರ್ವಹಿಸುವ ಪ್ರೋಜೆಕ್ಟ್/ ಅಸೈನ್ಮೆಂಟ್ ಹಾಗೂ ಯೋಜನಾ ಕಾರ್ಯವು ಸಹ ಇರುವುದರಿಂದ, ಎಲ್ಲಾ ವಿದ್ಯಾರ್ಥಿಗಳು ಓದುವ ಮತ್ತು ಬರೆಯುವ ಅಭ್ಯಾಸವನ್ನು ಮಾಡಲೇಬೇಕಾಗಿರುತ್ತದೆ.<br>3. ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ದಿನ ಪತ್ರಿಕೆಗಳನ್ನು ತರಿಸುವುದರಿಂದ ವಿದ್ಯಾರ್ಥಿಗಳು ಓದುವ ಅಭ್ಯಾಸವನ್ನು ಬೆಳಸಿಕೊಳ್ಳುತ್ತಾರೆ.<br>4. ಇಲಾಖಾ ವತಿಯಿಂದ ರಸಪ್ರಶ್ನೆ, ಪ್ರಬಂಧ, ಚರ್ಚಾ ಸ್ಪರ್ಧೆಗಳನ್ನು ನಡೆಸುವುದರಿಂದ ವಿದ್ಯಾರ್ಥಿಗಳು ಓದುವ ಅಭ್ಯಾಸವನ್ನು ರೂಢಿಸಿಕೊಳ್ಳುತ್ತಾರೆ. |

**ಸಂಖ್ಯೆ: ಇಪಿ 57 ಡಿಜಿಡಬ್ಲ್ಯೂ 2024**

(ಎಸ್, ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು